560

13121

# I Semester B.C.L.S./B.Com./B.C.S.P/B.C.T.T. Examination, December 2018
## (Semester Scheme) (CBCS)
## COMMERCE
## Financial Accounting

Time : 3 Hours Max. Marks : 70

***Instruction :*** *Answers should be written* ***completely*** *either in* ***English*** *or in* ***Kannada****.*

### SECTION – A

1. Answer **any five** sub questions. **Each** sub question carries **2** marks. **(5×2=10)**
   a) What do you mean by purchase consideration ?
   b) What is royalty ?
   c) What do you mean by Accounting Standards ?
   d) Give the meaning of hire purchase system.
   e) Give any two reasons for conversion of a firm into a limited company.
   f) What do you mean by shortworkings ?
   g) Mention any 2 objectives of Financial Accounting.

### SECTION – B

Answer **any three** questions. **Each** question carries **6** marks. **(3×6=18)**

2. Explain any 4 accounting concepts.

3. Prepare an analytical table of Royalty from the following details :
   Minimum rent – ₹ 25,000 p.a.
   Royalty – ₹ 2 per ton of ore raised
   Shortworkings are recoverable during the first 3 years of the lease only.
   The output for the first 4 years is as follows :
   1st year – 3,000 tons; 2nd year – 10,000 tons; 3rd year – 30,000 tons and 4th year – 35,000 tons

P.T.O.

4. From the following details, calculate purchase consideration and show the journal entries in the books of purchasing company.

   The purchasing company has agreed to issue 8,000 equity shares of ₹ 10 each at par, 500, 8% preference shares of ₹ 100 each @ 10% premium, 1,000 debentures of ₹ 50 each @ 10% discount and pay cash equal to 10% of purchase consideration.

5. From the following information you are required to determine the amount of total sales :

| | |
|---|---|
| Opening stock | ₹ 80,000 |
| Purchases | ₹ 4,00,000 |
| Closing stock | ₹ 70,000 |
| Rate of gross profit on sales | 20% |

6. Ms. Veena purchases a motor car on hire purchase system. Calculate cash price of the motor car from the following :

| | |
|---|---|
| Down payment | ₹ 20,000; |
| 1st Instalment | ₹ 28,000; |
| 2nd Instalment | ₹ 36,000; |
| 3rd Instalment | ₹ 33,000; |

   Rate of Interest – 10% p.a.

## SECTION – C

Answer **any three** questions. **Each** question carries **14** marks. **(3×14=42)**

7. On 1st January, 2014, Mr. Jayanth purchased a washing machine from Royal Enterprises on hire purchase basis. The cash price of the machine was ₹ 60,000, payable ₹ 12,000 on signing the agreement and the balance in 4 annual instalments of ₹ 12,000 plus interest @ 15% p.a. payable on 31st December each year. Jayanth writes off depreciation @ 10% p.a. on diminishing balance method. Show the necessary Ledger A/cs in the books of Jayanth.

8. X Co. Ltd. took a lease from a landlord for a period of 20 years from 1-1-2010 on a Royalty of ₹ 2 per ton of coal raised with a minimum rent of ₹ 20,000 and power to recoup shortworkings during the first four years of the lease. The annual output was as follows :

| Year | Tons |
|---|---|
| 2010 | 5,000 |
| 2011 | 8,000 |
| 2012 | 10,000 |
| 2013 | 15,000 |
| 2014 | 20,000 |

Prepare Minimum Rent A/c, Royalty A/c, Shortworkings A/c and Landlord A/c.

9. A, B and C were in partnership sharing profits and losses in the ratio of 4 : 3 : 1 respectively. On 31st March, 2018, they agreed to sell their business to a limited company. Their position on that date was as follows :

**Balance Sheet**

| Liabilities | Amount | Assets | Amount |
|---|---|---|---|
| Creditors | 16,000 | Land and Buildings | 36,000 |
| Loan from Bank | 8,000 | Furniture | 24,000 |
| Capital A/c | | Debtors | 30,000 |
| A | 40,000 | Stock | 26,000 |
| B | 30,000 | Cash | 4,000 |
| C | 26,000 | | |
| | **1,20,000** | | **1,20,000** |

The company took the following assets at the valuation shown below :

Land and Buildings – ₹ 44,000; Furniture – ₹ 22,000; Debtors – ₹ 28,000; Stock – ₹ 24,000 and Goodwill – ₹ 8,000.

The company also agreed to pay creditors which was agreed at ₹ 15,400.

The company paid 3,300 equity shares of ₹ 10 each and the balance in cash. The expenses amounted to ₹ 1,000. Prepare the necessary ledger accounts in the books of the firm.

10. Mr. Das keeps his books by single entry system. From the following data, prepare Trading and P & L A/c for the year ending 31st March, 2018 together with Balance Sheet as on that date :

a) Cash book analysis shows the following :

Salaries – ₹ 17,000; Business expenses – ₹ 15,600; Interest charges – ₹ 400; Drawings – ₹ 4,000; Payment to creditors – ₹ 30,000; Cash sales – ₹ 30,000; Receipts from debtors – ₹ 50,000; Balance at bank on 31-3-2018 – ₹ 5,000.

b) Further details available are :

| **Particulars** | **1-4-2017** | **31-3-2018** |
|---|---|---|
| | ₹ | ₹ |
| Stock | 18,000 | 20,440 |
| Creditors | 16,000 | 11,000 |
| Debtors | 44,000 | 60,000 |
| Furniture | 2,000 | 2,000 |
| Machinery | 30,000 | 30,000 |

c) Provide interest on opening capital @ 5%; provide ₹ 3,000 for doubtful debts and 5% depreciation on all fixed assets.

11. a) Calculate interest included in each instalment. Cash price – ₹ 60,000; down payment – ₹ 18,000 three annual instalments of ₹ 24,000, ₹ 18,000 and ₹ 12,000 respectively payable at the end of each year.

b) Ascertain credit sales from the following :

| | ₹ |
|---|---|
| Opening debtors | 80,500 |
| Cash received from debtors | 6,23,500 |
| B/R received | 24,000 |
| Sales returns | 8,000 |
| Bad debts | 6,800 |
| B/R dishonoured | 3,000 |
| Discount allowed | 2,000 |
| B/R discounted with bank | 4,500 |

## ಕನ್ನಡ ಆವೃತ್ತಿ

### ವಿಭಾಗ - ಎ

1. ಯಾವುದಾದರೂ **5** ಉಪ ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪಪ್ರಶ್ನೆಗೆ **2** ಅಂಕಗಳು. **(5×2=10)**

   a) ಖರೀದಿ ಬೆಲೆಯೆಂದರೇನು ?

   b) ರಾಜಧನ ಎಂದರೇನು ?

   c) ಲೆಕ್ಕಶಾಸ್ತ್ರ ಪ್ರಮಾಣಕ ಎಂದರೇನು ?

   d) ಬಾಡಿಗೆಗೆ ಕೊಂಡುಕೊಳ್ಳುವ ಪದ್ಧತಿಯ ಅರ್ಥ ವಿವರಣೆ ಕೊಡಿ.

   e) ಒಂದು ಪಾಲುಗಾರಿಕೆ ಸಂಸ್ಥೆಯನ್ನು ನಿಯಮಿತ ಕಂಪನಿಯಾಗಿ ಪರಿವರ್ತಿಸುವ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.

   f) ಕಡಿಮೆ ಉತ್ಪನ್ನ ಎಂದರೇನು ?

   g) ಆರ್ಥಿಕ ಲೆಕ್ಕಶಾಸ್ತ್ರದ ಯಾವುದಾದರೂ ಎರಡು ಉದ್ದೇಶಗಳನ್ನು ತಿಳಿಸಿ.

### ವಿಭಾಗ - ಬಿ

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **6** ಅಂಕಗಳು. **(3×6=18)**

2. ಯಾವುದಾದರೂ ನಾಲ್ಕು ಲೆಕ್ಕಶಾಸ್ತ್ರದ ಭಾವನೆಗಳನ್ನು ವಿವರಿಸಿ.

3. ಕೆಳಗಿನ ವಿವರಗಳಿಂದ ರಾಜಧನ ವಿಶ್ಲೇಷಣ ಪಟ್ಟಿಯನ್ನು ತಯಾರಿಸಿ :

   ಕನಿಷ್ಠ ಬಾಡಿಗೆ ವಾರ್ಷಿಕ – ರೂ. 25,000

   ಪ್ರತಿ ಟನ್ ಅದಿರಿಗೆ ರಾಜಧನ ರೂ. 2 ರಂತೆ

   ಭೋಗ್ಯದ ಮೊದಲು ಮೂರು ವರ್ಷಗಳಲ್ಲೇ ರಾಜಧನ ಕೊರತೆಯನ್ನು ಹಿಂಪಡೆಯಬಹುದು. ಮೊದಲ ನಾಲ್ಕು ವರ್ಷಗಳ ಉತ್ಪನ್ನ ಈ ಕೆಳಕಂಡಂತಿದೆ.

   1 ವರ್ಷ 3,000 ಟನ್‌ಗಳು

   2 ವರ್ಷ 10,000 ಟನ್‌ಗಳು

   3 ವರ್ಷ 30,000 ಟನ್‌ಗಳು

   4 ವರ್ಷ 35,000 ಟನ್‌ಗಳು.

4. ಕೆಳಕಂಡ ವಿವರಗಳಿಂದ ಖರೀದಿ ಬೆಲೆಯನ್ನು ಕಂಡುಹಿಡಿದು, ಕಂಡುಕೊಳ್ಳುವ ಕಂಪನಿಯ ಪುಸ್ತಕದಲ್ಲಿ ರೋಜು ದಾಖಲೆಗಳನ್ನು ತೋರಿಸಿ. ಖರೀದಿ ಕಂಪನಿಯು ರೂ. 10 ಬೆಲೆಯ 8,000 ಸಾಮಾನ್ಯ ಶೇರುಗಳನ್ನು ಮುಖ ಬೆಲೆಯಲ್ಲಿ, 500 ಶೇ. 8 ರ ಪ್ರಥಮ ಹಕ್ಕಿನ ಶೇರುಗಳನ್ನು (ಮುಖಬೆಲೆ ರೂ. 100) ಶೇ. 10 ರ ಹೆಚ್ಚುವರಿ ದರದಲ್ಲಿ, ರೂ. 50 ಮುಖಬೆಲೆಯ 1,000 ಸಾಲಪತ್ರಗಳನ್ನು ಶೇ. 10 ರ ರಿಯಾಯಿತಿ ದರದಲ್ಲಿ ಮತ್ತು ಒಟ್ಟು ಖರೀದಿ ಬೆಲೆಯ ಶೇ. 10 ರಷ್ಟನ್ನು ನಗದು ರೂಪದಲ್ಲಿ ನೀಡಲು ಒಪ್ಪಿದೆ.

5. ಕೊಟ್ಟಿರುವ ಮಾಹಿತಿಯಿಂದ ಒಟ್ಟು ಮಾರಾಟ ಮೊತ್ತವನ್ನು ನಿರ್ಧರಿಸಿ :

| | |
|---|---|
| ಆರಂಭಿಕ ಸರಕುಗಳು | ₹ 80,000 |
| ಖರೀದಿಗಳು | ₹ 4,00,000 |
| ಅಂತಿಮ ಸರಕುಗಳು | ₹ 70,000 |
| ಮಾರಾಟದ ಮೇಲಿನ ಸ್ಥೂಲ ಲಾಭ ದರ | ಶೇ. 20 |

6. ಶ್ರೀಮತಿ ವೀಣಾ ಮೋಟಾರು ಕಾರನ್ನು ಬಾಡಿಗೆ ಕೊಳ್ಳುವಿಕೆಯ ಪದ್ಧತಿಯಲ್ಲಿ ಖರೀದಿಸಿದಳು. ಈ ಕೆಳಗಿನ ವಿವರಗಳಿಂದ ಆ ಕಾರಿನ ನಗದು ಬೆಲೆಯನ್ನು ಕಂಡುಹಿಡಿಯಿರಿ.

ಮುಂಗಡ ಹಣ ರೂ. 20,000; ಮೊದಲ ಕಂತು ರೂ. 28,000; ಎರಡನೇ ಕಂತು ರೂ. 36,000; ಮೂರನೇ ಕಂತು ರೂ. 33,000; ಬಡ್ಡಿ ದರ ವಾರ್ಷಿಕ ಶೇ. 10.

## ವಿಭಾಗ - ಸಿ

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು. **(3×14=42)**

7. 1-1-2014 ರಂದು ಶ್ರೀ ಜಯಂತ್ ಒಂದು ಬಟ್ಟೆ ಒಗೆಯುವ ಯಂತ್ರವನ್ನು ರಾಯಲ್ ಎಂಟರ್‌ಪ್ರೈಸಸ್ ರವರಿಂದ ಬಾಡಿಗೆ ಖರೀದಿ ಪದ್ಧತಿಯಲ್ಲಿ ಖರೀದಿಸಿದ್ದಾರೆ. ಯಂತ್ರದ ನಗದು ಬೆಲೆ ರೂ. 60,000 ವನ್ನು ಕರಾರು ಪತ್ರಕ್ಕೆ ಸಹಿ ಹಾಕುವಾಗ ರೂ. 12,000 ಮತ್ತು ಉಳಿಕೆ ಮೊತ್ತವನ್ನು 4 ವಾರ್ಷಿಕ ಕಂತುಗಳಲ್ಲಿ ರೂ. 12,000 + ಶೇ. 15 ರಂತೆ ವರ್ಷಕ್ಕೆ ಬಡ್ಡಿ ಸೇರಿಸಿ ಪ್ರತಿವರ್ಷ ಡಿಸೆಂಬರ್ 31ಕ್ಕೆ ಪಾವತಿಸಬೇಕಿದೆ. ಶ್ರೀ ಜಯಂತ್ ಶೇ. 10 ರಷ್ಟು ಸವಕಳಿಯನ್ನು ಇಳುವರಿ ಬೆಲೆಯ ಆಧಾರದಲ್ಲಿ ಬರೆಯಲು ನಿರ್ಧರಿಸಿದ್ದಾರೆ. ಶ್ರೀ ಜಯಂತ್ ಅವರ ಪುಸ್ತಕದಲ್ಲಿ ಸೂಕ್ತ ಖಾತೆಗಳನ್ನು ತಯಾರಿಸಿ.

8. X ಕಂ. ಲಿ. ಭೂ ಮಾಲಿಕನಿಂದ ಒಂದು ಗುತ್ತಿಗೆಯನ್ನು 20 ವರ್ಷಗಳಿಗೆ 1-1-2010 ರಿಂದ, ಟನ್‌ಗೆ ರೂ. 2 ರಂತೆ ರಾಜಧನವನ್ನು ಕನಿಷ್ಠ ಬಾಡಿಗೆ ರೂ. 20,000 ಮತ್ತು ಕಡಿಮೆ ಉತ್ಪನ್ನಗಳನ್ನು ಹೆಚ್ಚು ಉತ್ಪನ್ನಗಳಿಂದ ಮೊದಲ ನಾಲ್ಕು ವರ್ಷದಲ್ಲಿ ಪಡೆಯಬಹುದೆಂದು ಗುತ್ತಿಗೆಗೆ ಪಡೆದಿವೆ. ವಾರ್ಷಿಕ ಉತ್ಪನ್ನಗಳು ಈ ಕೆಳಕಂಡಂತಿವೆ.

| ವರ್ಷ | ಟನ್‌ಗಳಲ್ಲಿ |
|---|---|
| 2010 | 5,000 |
| 2011 | 8,000 |
| 2012 | 10,000 |
| 2013 | 15,000 |
| 2014 | 20,000 |

ಕನಿಷ್ಠ ಬಾಡಿಗೆ ಖಾತೆ, ರಾಜಧನ ಖಾತೆ, ಕಡಿಮೆ ಉತ್ಪನ್ನಗಳ ಖಾತೆ ಮತ್ತು ಧಣಿ ಖಾತೆಗಳನ್ನು ತಯಾರಿಸಿ.

9. A, B ಮತ್ತು C ಪಾಲುದಾರಿಕೆಯಲ್ಲಿದ್ದು , ಲಾಭ ಮತ್ತು ನಷ್ಟಗಳನ್ನು 4 : 3 : 1 ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. 31-3-2018 ರಂದು ಒಂದು ನಿಯಮಿತ ಕಂಪನಿಗೆ ತಮ್ಮ ವ್ಯಾಪಾರ ಸಂಸ್ಥೆಯನ್ನು ಮಾರಲು ಒಪ್ಪಿಗೆ ನೀಡಿದರು. ಅಂದಿನಿಂದ ಅವರ ಸ್ಥಿತಿ ಈ ಕೆಳಕಂಡಂತಿದೆ.

ಆಸ್ತಿ ಜವಾಬ್ದಾರಿ ಪಟ್ಟಿ

| ಜವಾಬ್ದಾರಿಗಳು | ರೂ. | ಆಸ್ತಿಗಳು | ರೂ. |
|---|---|---|---|
| ಸಾಲಿಗರು | 16,000 | ಭೂಮಿ ಮತ್ತು ಕಟ್ಟಡ | 36,000 |
| ಬ್ಯಾಂಕಿನಿಂದ ಸಾಲ | 8,000 | ಪೀಠೋಪಕರಣಗಳು | 24,000 |
| ಬಂಡವಾಳ ಖಾತೆಗಳು : | | ಸಾಲಗಾರರು | 30,000 |
| A | 40,000 | ದಾಸ್ತಾನು | 26,000 |
| B | 30,000 | ನಗದು | 4,000 |
| C | 26,000 | | |
| | **1,20,000** | | **1,20,000** |

ಕಂಪನಿಯು ಈ ಕೆಳಗೆ ತೋರಿಸಿದ ಬೆಲೆಗಳಲ್ಲಿ ಆಸ್ತಿಗಳನ್ನು ತೆಗೆದುಕೊಂಡಿದೆ :

| | |
|---|---|
| ಭೂಮಿ ಮತ್ತು ಕಟ್ಟಡ | ರೂ. 44,000 |
| ಪೀಠೋಪಕರಣಗಳು | ರೂ. 22,000 |
| ಸಾಲಗಾರರು | ರೂ. 28,000 |
| ದಾಸ್ತಾನು | ರೂ. 24,000 |
| ಕೀರ್ತಿ ಮೌಲ್ಯ | ರೂ. 8,000 |

ರೂ. 15,400 ರನ್ನು ಸಾಲಿಗರಿಗೆ ಪಾವತಿಸಲು ಸಹಾ ಒಪ್ಪಿದೆ. ಕಂಪನಿಯು ರೂ. 10 ರ 3,300 ಷೇರುಗಳನ್ನು ನೀಡಿದ್ದು ಉಳಿಕೆ ಮೊತ್ತವನ್ನು ನಗದಿನ ರೂಪದಲ್ಲಿ ಪಾವತಿಸಿದೆ. ವೆಚ್ಚಗಳ ಮೊತ್ತ ರೂ. 1,000 ಸಂಸ್ಥೆಯ ಪುಸ್ತಕದಲ್ಲಿ ಸೂಕ್ತ ಖಾತೆಗಳನ್ನು ತಯಾರಿಸಿ.

10. ಶ್ರೀ ದಾಸ್ ಅವರು ತಮ್ಮ ಪುಸ್ತಕಗಳನ್ನು ಏಕ ನಮೂದು ಪ್ರಕಾರ ಇಟ್ಟಿರುತ್ತಾರೆ. ಈ ಕೆಳಗೆ ಕೊಟ್ಟಿರುವ ವಿವರಗಳಿಂದ 31-3-2018 ಕ್ಕೆ ಅಂತ್ಯವಾಗುವಂತೆ ವ್ಯಾಪಾರ ಖಾತೆ, ಲಾಭ ನಷ್ಟ ಖಾತೆಗಳನ್ನು ಅದರ ಜೊತೆಗೆ ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿ.

a) ಅದರ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ಕಂಡು ಬಂದವು :

ಸಂಬಳ – ರೂ. 17,000; ವ್ಯಾಪಾರದ ಖರ್ಚು – ರೂ. 15,600; ಬಡ್ಡಿ ಕೊಟ್ಟಿದ್ದು – ರೂ. 400; ಸ್ವಂತ ಖರ್ಚು – ರೂ. 4,000; ಧನಿಗಳಿಗೆ ಕೊಟ್ಟಿದ್ದು – ರೂ. 30,000; ನಗದು ಮಾರಾಟ – ರೂ. 30,000; ಋಣಿಗಳಿಂದ ಬಂದಿದ್ದು – ರೂ. 50,000; ಬ್ಯಾಂಕಿನ ಶಿಲ್ಕು 31-3-2018 – ರೂ. 5,000.

b) ಇತರೆ ದೊರೆಯುವ ಮಾಹಿತಿಗಳು ಈ ರೀತಿ ಇವೆ.

| ವಿವರಗಳು | 1-4-2017 | 31-3-2018 |
|---|---|---|
| | ₹ | ₹ |
| ದಾಸ್ತಾನು | 18,000 | 20,440 |
| ಧನಿಗಳು | 16,000 | 11,000 |
| ಋಣಿಗಳು | 44,000 | 60,000 |
| ಪೀಠೋಪಕರಣಗಳು | 2,000 | 2,000 |
| ಯಂತ್ರಗಳು | 30,000 | 30,000 |

c) ದಾಸ್ ಅವರ ಪ್ರಾರಂಭಿಕ ಬಂಡವಾಳದ ಮೇಲೆ ಶೇ. 5 ರಂತೆ ಬಡ್ಡಿ ತೆಗೆದಿರಿಸಿ, ಋಣಿಗಳ ಮೇಲೆ ಸಂಶಯಾಸ್ಪದ ನಿಧಿಗಾಗಿ 3,000 ರೂ. ಗಳನ್ನು ತೆಗೆದಿರಿಸಿ ಮತ್ತು ಎಲ್ಲಾ ಸ್ಥಿರಾಸ್ತಿಗಳ ಮೇಲೆ ಶೇ. 5 ರಂತೆ ಸವಕಳಿಯನ್ನು ತೆಗೆಯಿರಿ.

11. a) ಪ್ರತಿ ಕಂತುವಿನಲ್ಲಿ ಸೇರಿರುವ ಬಡ್ಡಿಯನ್ನು ಕಂಡುಹಿಡಿಯಿರಿ :

ನಗದು ಬೆಲೆ ರೂ. 60,000

ಅಡಿಪಾವತಿ ರೂ. 18,000

ಪ್ರತಿ ವರ್ಷದ ಅಂತ್ಯದಲ್ಲಿ ಕೊಡಬಹುದಾದ ಮೂರು ವಾರ್ಷಿಕ ಕಂತುಗಳು ಕ್ರಮವಾಗಿ ರೂ. 24,000, ರೂ. 18,000 ಮತ್ತು ರೂ. 12,000.

b) ಈ ಕೆಳಕಂಡವುಗಳಿಂದ ಸಾಲ ಮಾರಾಟದ ಮೊತ್ತವನ್ನು ಕಂಡುಹಿಡಿಯಿರಿ.

| | ರೂ. |
|---|---|
| ಪ್ರಾರಂಭಿಕ ಸಾಲಗಾರರು | 80,500 |
| ಸಾಲಗಾರರಿಂದ ಬಂದ ಹಣ | 6,23,500 |
| ಪಡೆದ ಹುಂಡಿಗಳು | 24,000 |
| ಮಾರಾಟ ವಾಪಸ್ಸು | 8,000 |
| ಕರಡು ಸಾಲ | 6,800 |
| ಹುಂಡಿಗಳ ನಿರಾಕರಣೆ | 3,000 |
| ಕೊಟ್ಟ ಸೋಡಿ | 2,000 |
| ಬ್ಯಾಂಕಿನಲ್ಲಿ ಮುರಿದ ಹುಂಡಿಗಳು | 4,500 |